ಎಂ.ಸಿ. ಧನ್ಯತಾ, ಬೆಂಗಳೂರು
ಬದುಕಿನ ಹಣತೆ ಸದಾ ಬೆಳಗುತ್ತಿರಲು ಅನುಸರಿಸಬೇಕಾದ ಮಾರ್ಗ ಯಾವುದು?



ಕಿಡಿಗೇಡಿಗಳ ಗಾಳಿ ಬೀಸದಂತೆ ನೋಡಿಕೊಳ್ಳಬೇಕು.

ವಿ. ಹೇಮಂತಕುಮಾರ್, ಬೆಂಗಳೂರು
ಹೆಂಡತಿಯ 'ರೀ' ಎಂಬ ಪೀಠಿಕೆ ಗಂಡನಿಗೆ ಯಾವುದರ ಮುನ್ನುಡಿ?
ಅವನ ವಿರಾಮಕ್ಕೆ ಇತಿಶ್ರೀ ಆಗುವುದರ ಮುನ್ನುಡಿ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸರ್ಕಾರಿ ಅಧಿಕಾರಿ ಲಂಚಾವತಾರದಲ್ಲಿ ಬಂಧಿತನಾದರೆ ಆತನ ಕುಟುಂಬದವರನ್ನು ತನ್ನ ಸ್ಥಾನಕ್ಕೆ ನೇಮಿಸಬಹುದಾ?
ತನ್ನ ಸ್ಥಾನದಲ್ಲಿ ಜೈಲಿಗೆ ಹೋಗಲಂತೂ ಅವಶ್ಯವಾದ ಸಾಕ್ಷಿ ಖರೀದಿ ಸಾಧ್ಯ.

ಅಮರಯ್ಯಾ ಪತ್ರಿಮಠ, ಸುರಪುರ
ನೆಮ್ಮದಿ, ಸುಖ, ಸಂತೋಷದ 'ಕಣಜ' ಯಾವುದು?



ತೃಪ್ತಿ.

ಎನ್. ಗೋಪಾಲರಾವ್, ಬೆಂಗಳೂರು
ನೀವು ರಾಜಕೀಯ ವ್ಯಕ್ತಿಗಳ ಬಗ್ಗೆ ಬರುವ ಪ್ರಶ್ನೆಗಳಿಗೆ ಉತ್ತರ ನೀಡುತ್ತೀರಾ?
ಊಹೂಂ. ಈ ಅಂಕಣದಲ್ಲಿ ಆ ವಿಷಯಗಳಿಗೆ ಅವಕಾಶವಿಲ್ಲ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಕಾಂಪ್ಲಿಮೆಂಟ್‌ಗೂ, ಕಂಪ್ಲೇಂಟ್‌ಗೂ ವ್ಯತ್ಯಾಸವೇನು?
ಕಾಂಪ್ಲಿಮೆಂಟ್ ಮುನ್ನುಡಿ; ಕಂಪ್ಲೇಂಟ್ ವಿಮರ್ಶೆ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ
ಕೆಂಡದಂತಿರದೆ ಇದ್ದಿಲಂತಿರುವವಳಲ್ಲಾ...?
ಹಾಲಿನಂತಹವಳ ಪಾತ್ರಕ್ಕೇ ಬೆಂಕಿಯಿಟ್ಟು ಆ ಹಂತಕ್ಕೆ ಕೆಡಿಸಿದಿರಂತಲ್ಲ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪಾಪಗಳನ್ನು ತೊಳೆಯುವ ವಾಷಿಂಗ್ ಮೆಷಿನ್ ಯಾವಾಗ ತಯಾರಾಗುತ್ತೆ?
ಅಂದಿನಿಂದಲೂ ಇದೆಯಂತೆ; ಅದರ ಹೆಸರು 'ದೇವರು'.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ವೋಟು ಹಾಕುವವರು ಭಿಕ್ಷೆ ಬೇಡಬಾರದೆಂದು ಹೇಳಿದಿರಿ?
ಹೌದು. ಹಾವು ಚೇಳುಗಳನ್ನು ಭಿಕ್ಷೆ ಬೇಡಿದರೆ ದೊರಕುವುದು ಕೇಡೇ.

ರಾಜಶೇಖರ ಹಾದಿಮನಿ, ಧಾರವಾಡ
ಹೆಂಡತಿ ಕೆಟ್ಟರೆ ಸಂಸಾರ ಕೆಡುತ್ತದೆ. ಗಂಡ ಕೆಟ್ಟರೆ?
ಕ್ಲಬ್ಬೋ, ಹೆಂಡದಂಗಡಿಯೋ ಉದ್ಧಾರವಾಗುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು
ಏಕಮುಖ ಸಂಚಾರಕ್ಕೂ, ಏಕಮುಖ ಪ್ರೀತಿಗೂ ಏನು ವ್ಯತ್ಯಾಸ?
ಅಲ್ಲಿ ಮುಂದಿನವರು ಹೋಗಲೆಂಬ ತವಕ; ಇಲ್ಲಿ ಮುಂದಿನವರು ಇರಲೆಂಬ ಹಂಬಲ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಸಾಮಾನ್ಯರದು ಮನೆ; ಸಿರಿವಂತರದು ಭವನ; ಮಠಾಧೀಶರದು?
ಕೆಲವರದಂತೂ ಮ–ಮದ; ಹ–ಹಣ; ಲ–ಲಂಪಟತೆ ಇರುವ ಮಹಲ್!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಪುಣ್ಯಸ್ಥಳಗಳು ಭರ್ತಿ ಆಗುತ್ತಿರುವುದು ಸರ್ಕಾರದ ಗ್ಯಾರಂಟಿಯಿಂದಲೋ, ಜನರ ಭಕ್ತಿಯಿಂದಲೋ?
ಭರ್ತಿಯಲ್ಲ, ಖಾಲಿ ಆಗುತ್ತಿವೆ – ಎರಡು ಹೊತ್ತೂ ಊಟವಿದ್ದ ಕಡೆ ಈಗ ಒಂದು ಹೊತ್ತಿಗೇ ಡಬರಿ ಖಾಲಿ.

## ಬಹುಮಾನಿತ ಪ್ರಶ್ನೆ

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
ಗುಡಿಯಲ್ಲಿರುವ ಬಸವಣ್ಣನನ್ನು ಎತ್ತು, ಆಕಳು ಎಂದೇಕೆ ಹೇಳುವುದಿಲ್ಲ?
ಪೂಜಿಸಲಾಗುವ ಗೂಳಿಯೇ ಬಸವಣ್ಣ; ಗರ್ಭಗುಡಿ ಸೇರಿದಾಗ ಕಲ್ಲು ವಿಗ್ರಹವಾಗುತ್ತದೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಜನರನ್ನು ಮೆಚ್ಚಿಸಲು ಕೆಲವರು ಅಸತ್ಯವನ್ನು ನುಡಿಯುತ್ತಾರಲ್ಲ...?
ಮೆಚ್ಚಿಸಲೆಂದೇ ಅಲ್ಲ; ಸುಳ್ಳು ತಮ್ಮ ಹುಳುಕನ್ನು ಮುಚ್ಚಿಕೊಳ್ಳಲು ಬಳಸುವ ಅಸ್ತ್ರ.

ಅಭಿಷೇಕ ಬೊಂಗಾಳೆ, ಬೈಲಹೊಂಗಲ
ಆಗಿನ ಕಾಲಕ್ಕೂ, ಈಗಿನ ಕಾಲಕ್ಕೂ ಏನು ವ್ಯತ್ಯಾಸ?
ಆಗ ಗೋಸುಂಬೆಗಳು ವನದಲ್ಲಷ್ಟೇ ಕಾಣಸಿಗುತ್ತಿದ್ದವು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಚಂದ್ರ: ಇದರ ನಿಜವಾದ ಅರ್ಥ?



ಕವಿಗಳಿಗೆ, ವಿರಹಿಗಳಿಗೆ ಹುಚ್ಚು ಹಿಡಿಸುವ ಆಕಾಶಲಾಂದ್ರ.

ಮಹಾವೀರ ಕಾಸರ, ಶಿವಮೊಗ್ಗ
ತಾಪತ್ರಯದಲ್ಲಿ ಅಡಗಿರುವ ಮೂರರ ಪರಿಚಯ ಹೇಳಿ?
ತಾಪ, ಪ್ರತಾಪ, ಸಂತಾಪ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಜಿಪುಣನಿಗೂ, ನಿಪುಣನಿಗೂ ಏನು ವ್ಯತ್ಯಾಸ?
ಅತಿ ಕಡಿಮೆ ಹಣ ವ್ಯಯಿಸುವವನು ಜಿಪುಣ; ಅತಿ ಕಡಿಮೆ ಶ್ರಮ ವಯಿಸುವವನು ನಿಪುಣ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
'ಸಮಸ್ಯೆ'ಗಳ ಉದ್ಭವ ಎಲ್ಲಿಂದ?
'ಅಗತ್ಯ'ಗಳ ಪಟ್ಟಿ ಬೆಳೆಯುವುದರಿಂದ.

■ ರಾಮ್